ಹನಿ

# ಉಪಖಂಡದ ಹೆಮ್ಮೆ

ಭಾರತದ ಹೆಮ್ಮೆ ಸಾನಿಯಾ ಮಿರ್ಜಾ ಮತ್ತೆ ಸುದ್ದಿಯಲ್ಲಿದ್ದಾರೆ. ಜಿಂಬಾಬ್ವೆಯ ಕಾರಾ ಬ್ಲಾಕ್ ಜತೆಗೂಡಿ ಸಿಂಗಾಪುರದಲ್ಲಿ ನಡೆದ ವಿಶ್ವದ ಪ್ರತಿಷ್ಠಿತ ಡಬ್ಲ್ಯುಟಿಎ ವಿಶ್ವ ಡಬಲ್ಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡಿದ್ದಾರೆ. ಸಾನಿಯಾಳಿಗೆ ಮಾತ್ರವಲ್ಲ ಭಾರತಕ್ಕೂ ಇದೊಂದು ಭಾವೋದ್ವೇಗದ ಕ್ಷಣ. 40 ವರ್ಷಗಳ ಹಿಂದೆ ಭಾರತದ ವಿಜಯ್ ಅಮೃತರಾಜ್ (ಅಮೆರಿಕದ ಡಿಕ್ ಸ್ಟಾಕ್ಟನ್ ಜತೆಗೂಡಿ) ಹೀಗೆಯೇ ಅಮೆರಿಕದಲ್ಲಿ ಎಟಿಪಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿದ್ದರು. ಅದು ಬಿಟ್ಟರೆ ಇದೇ ಮೊದಲ ಬಾರಿಗೆ ಟೆನಿಸ್‌ನಲ್ಲಿ ಭಾರತೀಯರೊಬ್ಬರು ಮೇರುಸಾಧನೆ ಮೆರೆದಂತಾಗಿದೆ. ಸಾನಿಯಾ ವೃತ್ತಿಜೀವನದಲ್ಲೂ ಇದೊಂದು ಮೈಲಿಗಲ್ಲು. ಕಳೆದ ವರ್ಷದಿಂದ ಸಿಂಗಲ್ಸ್ ಕೈಬಿಟ್ಟು ಡಬಲ್ಸ್ ಮತ್ತು ಮಿಕ್ಸೆಡ್ ಡಬಲ್ಸ್‌ನಲ್ಲೇ ಗಮನ ಕೇಂದ್ರೀಕರಿಸಿರುವ ಸಾನಿಯಾ ಆಟದಲ್ಲಿ ತಮ್ಮ ನೈಜ ಲಯವನ್ನು ಕಂಡುಕೊಂಡಿದ್ದು, ಸ್ಥಿರವಾದ ಫಾರ್ಮ್ ಪ್ರದರ್ಶಿಸುತ್ತಿದ್ದಾರೆ.

ಟೆನಿಸ್ ಸಿಂಗಲ್ಸ್‌ನಲ್ಲಿ ವೇಗ– ಶಕ್ತಿಯೇ ಪ್ರಧಾನವಾದರೆ, ಡಬಲ್ಸ್‌ನಲ್ಲಿ ಅದರ ಜತೆಗೆ ತಾಳ್ಮೆ ಮತ್ತು ಹೊಂದಾಣಿಕೆಯೂ ಮಹತ್ವದ ಪಾತ್ರ ವಹಿಸುತ್ತದೆ. ಸಿಂಗಲ್ಸ್‌ನಲ್ಲಿ ಈವರೆಗೆ ಆಡಿರುವ ಪಂದ್ಯಗಳಲ್ಲಿ 271 ಗೆಲುವುಗಳನ್ನೂ 161 ಸೋಲುಗಳನ್ನೂ ದಾಖಲಿಸಿರುವ ಸಾನಿಯಾ ವಿಶ್ವ ರ‍್ಯಾಂಕಿಂಗ್‌ನಲ್ಲಿ 27ನೇ ಸ್ಥಾನಕ್ಕೆ ಏರಿದ್ದು (2007 ಆಗಸ್ಟ್) ಅತ್ಯಂತ ದೊಡ್ಡ ಸಾಧನೆ. ಅದರಲ್ಲೂ ವಿಶ್ವದ ನಂಬರ್ ಒನ್ ಆಟಗಾರ್ತಿ ಮಾರ್ಟಿನಾ ಹಿಂಗಿಸ್ ಸಹಿತ ಏಳೆಂಟು ಖ್ಯಾತನಾಮರನ್ನು ಈಕೆ ಸೋಲಿಸಿದ್ದು ಗಮನಾರ್ಹ.

ಡಬಲ್ಸ್‌ನಲ್ಲಿ ಸಾನಿಯಾ ಈಗ ವಿಶ್ವದಲ್ಲೇ 5ನೇ ರ‍್ಯಾಂಕ್ ಪಡೆದಿದ್ದಾರೆ. ಆಟದಲ್ಲಿ ಈ ಸ್ಥಿರತೆಯನ್ನೇ ಕಾಯ್ದುಕೊಂಡರೆ ಈಕೆ 'ವಿಶ್ವದ ನಂಬರ್ ಒನ್ ಡಬಲ್ಸ್ ಆಟಗಾರ್ತಿ' ಆಗುವ ದಿನಗಳು ದೂರವಿಲ್ಲ. 'ಅದು ನನ್ನ ಮುಂದಿರುವ ಗುರಿಯೂ ಹೌದು' ಎಂದಿದ್ದಾರೆ 28ರ ಹರೆಯದ ಸಾನಿಯಾ. (ಬರ್ತ್‌ಡೇ 15–11–1986)

ಹೆಣ್ಣುಮಕ್ಕಳು ಕ್ರೀಡೆಯಲ್ಲಿ ಅತ್ಯುನ್ನತ ಮಟ್ಟಕ್ಕೆ ಏರುವುದಕ್ಕೆ ನಮ್ಮಲ್ಲಿ ನೂರೆಂಟು ಅಡ್ಡಿಗಳಿವೆ. ಹಾಗೆ ನೋಡಿದರೆ ಸಾನಿಯಾ ಉಳಿದೆಲ್ಲ ಹೆಣ್ಣುಮಕ್ಕಳಿಗಿಂತ ಹೆಚ್ಚೇ ಅಡೆ ತಡೆಗಳನ್ನು ಎದುರಿಸಿ ಪುಟಿದೆದ್ದು ನಿಂತಿದ್ದಾರೆ. ವೈಯಕ್ತಿಕ ಬದುಕಿನ ಗೊಂದಲಗಳು, ವಿರೋಧಿಗಳ ಅವಮಾನ, ಟೀಕೆ, ಕುತ್ಸಿತ ಮನಸ್ಸಿನವರ ಸಂಶಯಗಳ ಮಧ್ಯೆಯೂ ಆಟದಲ್ಲಿ ಮನಸ್ಸು ಕೇಂದ್ರೀಕರಿಸಿ ಪ್ರತಿಭೆ ಮೆರೆದಿದ್ದಾಳೆ. ಭಾರತಕ್ಕೆ ಕೀರ್ತಿ ತಂದಿದ್ದಾಳೆ.



ಟೆನಿಸ್‌ನಲ್ಲಿ ತುಂಡುಲಂಗ ಧರಿಸಿ ಆಡುವುದು ಇಸ್ಲಾಮ್‌ಗೆ ಅವಮರ್ಯಾದೆ ಎಂದು 2005ರಲ್ಲಿ ಈಕೆಯ ವಿರುದ್ಧ ಮೌಲ್ವಿಯೊಬ್ಬರು ಫತ್ವಾ ಹೊರಡಿಸಿದ್ದರು. ಅದೇ ವರ್ಷ 'ಸುರಕ್ಷಿತ ಸೆಕ್ಸ್' ಬಗ್ಗೆ ಈಕೆ ಮಾತನಾಡಿದ್ದು ವಿವಾದವಾಗಿ, ಕೊನೆಗೆ 'ಮದುವೆಯ ಮುಂಚಿನ ಲೈಂಗಿಕತೆಯನ್ನು ನಾನು ಬೆಂಬಲಿಸಿಲ್ಲ' ಎಂದು ಸ್ಪಷ್ಟನೆ ನೀಡಬೇಕಾಯಿತು. 2006ರಲ್ಲಿ ಇಸ್ರೇಲಿನ ಶಹಾರ್ ಪೀರ್ ಜತೆ ಈಕೆ ಮಿಕ್ಸೆಡ್ ಡಬಲ್ಸ್ ಆಡುವುದಿಲ್ಲ ಎಂಬ ವಿವಾದ ಭುಗಿಲೆದ್ದಿತು. 2007ರಲ್ಲಿ ಅಮೆರಿಕದಲ್ಲಿ ನಡೆದ ಟೂರ್ನಿಯಲ್ಲಿ ಆತನ ಜತೆ ಸೇರಿ ಆಡಿದಾಗ ಟೀಕಾಕಾರರು ತುಟಿಬಿಚ್ಚಲಿಲ್ಲ. 2008ರಲ್ಲಿ ಹೋಪ್‌ಮನ್ ಕಪ್‌ನಲ್ಲಿ ರೋಹನ್ ಬೋಪಣ್ಣನ ಆಟ ನೋಡುತ್ತಿದ್ದಾಗ ಕುರ್ಚಿ ಮೇಲೆ ಕಾಲು ಚಾಚಿ ಕುಳಿತಿದ್ದಳು. ಅದ್ಯಾರೋ ಛಾಯಾಗ್ರಾಹಕ ಕುರ್ಚಿಯ ಕೆಳಬದಿಯಲ್ಲಿದ್ದ ಸಣ್ಣ ಪ್ಲಾಸ್ಟಿಕ್ ರಾಷ್ಟ್ರಧ್ವಜದ ಸಮೇತ ಈಕೆಯ ಫೋಟೋ ಕ್ಲಿಕ್ಕಿಸಿ ಪತ್ರಿಕೆಯಲ್ಲಿ ಪ್ರಕಟಿಸಿದ. ಅದೊಂದು ದೊಡ್ಡ ವಿವಾದವಾಗಿ ಈಕೆ ತನ್ನ ರಾಷ್ಟ್ರಭಕ್ತಿಯ ಬಗ್ಗೆ ಸ್ಪಷ್ಟನೆ ಕೊಡಬೇಕಾಯಿತು.

ಬಾಲ್ಯದ ಗೆಳೆಯ ಸೊಹ್ರಾಬ್ ಮಿರ್ಜಾ ಜತೆಗೆ ಮದುವೆ ನಿಶ್ಚಿತಾರ್ಥ ಆರು ತಿಂಗಳಲ್ಲೇ ಮುರಿದುಬಿತ್ತು. ಆ ಬಳಿಕ ಸಾನಿಯಾ, ಪಾಕಿಸ್ತಾನದ ಕ್ರಿಕೆಟಿಗ ಶೋಯಬ್ ಮಲಿಕ್ ಜತೆ ಸ್ನೇಹ ಬೆಳೆಸಿಕೊಂಡಳು. ಅವರಿಬ್ಬರೂ ಮದುವೆಯಾಗುವ ಸುದ್ದಿ ಬಂದಾಗ ಈಕೆಯ ದೇಶಭಕ್ತಿಯ ಬಗ್ಗೆ ಇನ್ನೊಂದು ರೌಂಡ್ ಟೀಕೆಗಳ ಸುರಿಮಳೆಯಾಯಿತು. ಟೀಕೆಗಳ ಮಧ್ಯೆಯೇ 61 ಲಕ್ಷ ರೂಪಾಯಿ ವಧುದಕ್ಷಿಣೆ ಕೊಟ್ಟು ಸಾನಿಯಾಳನ್ನು ನಿಖಾಹ್ ಆದನಾತ. ಆದರೆ ಅದಕ್ಕೂ ಮುನ್ನ ಆತ ಇನ್ನೊಬ್ಬಳನ್ನು ಮದುವೆಯಾಗಿದ್ದ ಸುದ್ದಿ ಹೊರಬಿದ್ದು ಗದ್ದಲವಾಯಿತು. ಆರಂಭದಲ್ಲಿ ಈ ಸುದ್ದಿಯನ್ನು ನಿರಾಕರಿಸಿದ ಶೋಯಬ್ ಬಳಿಕ ಒತ್ತಡಕ್ಕೆ ಬಗ್ಗಿ ಮೊದಲ ಪತ್ನಿಗೆ ತಲಾಖ್ ಕೊಟ್ಟ. ಹೀಗೆ ವಿವಾದಗಳು ಸಾನಿಯಾಳ ಬೆನ್ನಹಿಂದೆಯೇ ನಡೆದುಬಂದವು.

ಒಂದು ಹಂತದಲ್ಲಿ ವಿವಾದಗಳಿಂದ ರೋಸಿಹೋಗಿ 'ಇನ್ನು ಮುಂದೆ ಭಾರತದಲ್ಲಿ ಟೆನಿಸ್ ಆಡುವುದಿಲ್ಲ' ಎಂದು (2008 ಫೆಬ್ರುವರಿ) ಹೇಳಿಕೆ ನೀಡಿದ್ದ ಸಾನಿಯಾ, 2010ರಲ್ಲಿ ದೆಹಲಿ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಆಟವಾಡಿ ಹಳೆಯ ನೋವುಗಳನ್ನು ಮರೆತಳು.

2003ರಲ್ಲಿ ವೃತ್ತಿಪರ ಟೆನಿಸ್‌ಗೆ ಇಳಿದ ಸಾನಿಯಾಗೆ ಅಪ್ಪ ಇಮ್ರಾನ್ ಮತ್ತು ಖ್ಯಾತ ಆಟಗಾರ ರೋಜರ್ ಆ್ಯಂಡರ್‌ಸನ್ ತರಬೇತಿ ನೀಡಿದವರು. ಈವರೆಗೆ ಈಕೆ ಗೆದ್ದಿರುವ ಬಹುಮಾನ ಮೊತ್ತ 36.26 ಲಕ್ಷ ಯುಎಸ್ ಡಾಲರ್ ದಾಟಿರುವುದೂ ಒಂದು ದಾಖಲೆ. ಭಾರತದ ಮಾಜಿ ಕ್ರಿಕೆಟ್ ಕ್ಯಾಪ್ಟನ್ ಗುಲಾಂ ಅಹ್ಮದ್ ಮತ್ತು ಪಾಕಿಸ್ತಾನದ ಮಾಜಿ ಕ್ಯಾಪ್ಟನ್ ಆಸಿಫ್ ಇಕ್ಬಾಲ್ ಸಂಬಂಧಿ ಈಕೆ. ಹೈದರಾಬಾದ್, ದುಬೈ ಮತ್ತು ಪಾಕಿಸ್ತಾನದ ಸಿಯಾಲ್‌ಕೋಟ್‌ಗಳಲ್ಲಿ ಮನೆ ಹೊಂದಿರುವ ಈಕೆ ಒಂದರ್ಥದಲ್ಲಿ ಭಾರತದ ಉಪಖಂಡದ ಹೆಮ್ಮೆ. ಆದರೆ ಈಕೆಯನ್ನು ಹೊಸ ರಾಜ್ಯ ತೆಲಂಗಾಣದ ರಾಯಭಾರಿಯನ್ನಾಗಿ ಮಾಡಿದಾಗ ಬಿಜೆಪಿ ಸಂಸದರೊಬ್ಬರು 'ಪಾಕಿಸ್ತಾನದ ಸೊಸೆ'ಯನ್ನು ರಾಯಭಾರಿ ಮಾಡಬೇಡಿ ಎಂದು ಬೊಬ್ಬಿರಿದರು! ಅಂಗಣದಲ್ಲಿ ಎರಡೂ ಕೈಗಳಲ್ಲಿ ಬ್ಯಾಕ್‌ಹ್ಯಾಂಡ್ ಶಾಟ್‌ಗಳನ್ನು ನಿರ್ವಹಿಸುವ ಈ ಬಲಗೈ ಆಟಗಾರ್ತಿ, ಜೀವನದುದ್ದಕ್ಕೂ ವಿರೋಧಿಗಳ ಟೀಕೆಗೆ ಆಟದ ಮೈದಾನದ ಸಾಧನೆಯಿಂದಲೇ ಉತ್ತರ ಕೊಡುತ್ತಿರುವುದು ಕುತೂಹಲಕಾರಿ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65